

# ಕಲಾಕಾರ್ ಶೈನಿಂಗ್!

'ಕಲಾಕಾರ್' ಖ್ಯಾತಿಯ, 'ಗನ್' ಕುಖ್ಯಾತಿಯ ನಟ–ನಿರ್ದೇಶಕ ಹರೀಶ್ ರಾಜ್ ಈಗ ಏನು ಮಾಡುತ್ತಿದ್ದಾರೆ? ಅವರನ್ನೇ ಕೇಳಿದರೆ, 'ಅಂಬರ', 'ಬರ್ಫಿ', 'ಶ್ರೀಮತಿ ಜಯಲಲಿತಾ' ಸಿನಿಮಾಗಳ ಹೆಸರು ಹೇಳುತ್ತಾರೆ. 'ಬರ್ಫಿ' ಚಿತ್ರ ಕಳೆದ ವಾರ ತೆರೆಕಂಡಿದೆ. ಎಂದಿನಂತೆ ನಟನೆಯಲ್ಲಿ ಹರೀಶ್‌ರಿಗೆ ಫಸ್ಟ್ ಕ್ಲಾಸ್ ಅಂಕ. 'ಅಂಬರ' ಹಾಗೂ 'ಶ್ರೀಮತಿ ಜಯಲಲಿತಾ' ಸಿದ್ಧತೆಯ ಹಂತದಲ್ಲಿವೆ.

'ಶ್ರೀಮತಿ ಜಯಲಲಿತಾ' ಚಿತ್ರದಲ್ಲಿ ಶರಣ್ ಹೆಣ್ಣಿನ ವೇಷದಲ್ಲಿ ನಟಿಸುತ್ತಿದ್ದಾರೆ. ಆ ಹೆಣ್ಣಿನ ಪ್ರಿಯಕರನ ಪಾತ್ರ ಹರೀಶ್ ಅವರದ್ದು. ತಮ್ಮ ಜೊತೆ ಇರುವುದು ನಕಲಿ ಹೆಣ್ಣು ಎನ್ನುವುದು ಸಿನಿಮಾದ ಕೊನೆಯಲ್ಲಷ್ಟೇ ಗೊತ್ತಾಗುತ್ತದಂತೆ. ಹಾಗಾಗಿ, ಚಿತ್ರದುದ್ದಕ್ಕೂ ಪೇಚು ಪಡಿಪಾಟಲಿನ ಪಾತ್ರದಲ್ಲಿ ಹರೀಶ್ ನಟನೆಗೆ ಸಾಕಷ್ಟು ಅವಕಾಶವಿದೆಯಂತೆ.

ಸಿನಿಮಾದ ಜೊತೆಗೆ ಕಿರುತೆರೆಯಲ್ಲೂ ಹರೀಶ್ ಬಿಜಿಯಾಗಿದ್ದಾರೆ. ಉದಯ ವಾಹಿನಿಗಾಗಿ 'ಸೂಪರ್ ಕುಟುಂಬ' ಎನ್ನುವ ರಿಯಾಲಿಟಿ ಶೋ ನಡೆಸಿಕೊಡಲು ಅವರು ಸಿದ್ಧತೆ ನಡೆಸಿದ್ದಾರೆ. ಇದೇ ಹೊತ್ತಿಗೆ, ಝೀ ವಾಹಿನಿಯ 'ಮಿನಿ ಸಿನಿಮಾ' ಯೋಜನೆಯಲ್ಲೂ ತೊಡಗಿಕೊಂಡಿದ್ದಾರೆ. 'ಸೈಕೊ ಜಯಶಂಕರ್' ಚಿತ್ರದಲ್ಲಿ ಅವರದೇ ಮುಖ್ಯಪಾತ್ರ.

ನನಗೆ ಬೆಳ್ಳಿತೆರೆ – ಕಿರುತೆರೆ ಎನ್ನುವ ವ್ಯತ್ಯಾಸಗಳಿಲ್ಲ. ಎಲ್ಲಿ ಹೊಸತನ ಇರುತ್ತದೋ ಅಲ್ಲಿ ನಾನಿರುತ್ತೇನೆ ಎನ್ನುತ್ತಾರೆ ಹರೀಶ್ ರಾಜ್. ನಿರ್ದೇಶಕನಾಗಿ ಹೊಸ ಕನಸುಗಳನ್ನು ಕಟ್ಟಿಕೊಳ್ಳುತ್ತಲೇ ನಟನಾಗಿಯೂ ಅವರು ತಮ್ಮ ಪಾಲಿಗೆ ಬಂದ ಅವಕಾಶಗಳನ್ನು ಒಲ್ಲೆನ್ನದೆ ನಿರ್ವಹಿಸುತ್ತಿದ್ದಾರೆ. ಅಲ್ಲಿಗೆ 'ಕಲಾಕಾರ್'ಗೆ ಒಳ್ಳೆಯ ಸಮಯ ಬಂದಿದೆ ಎಂದಾಯಿತು.

# ಅಭಿನೇತ್ರಿಯ ಅವತಾರ

'ನನ್ನ ಸಿನಿಮಾ ಕನ್ನಡದ ಎಲ್ಲ ಹಿರಿಯ ಕಲಾವಿದೆಯರಿಗೆ ಅರ್ಪಣೆ'.

'ಅಭಿನೇತ್ರಿ'ಯ ಪೋಷಾಕಿನಲ್ಲಿ ಕಂಗೊಳಿಸುತ್ತಿರುವ ನಟಿ ಪೂಜಾ ಗಾಂಧಿ ಅವರ ಮಾತುಗಳಿವು. 'ಅಭಿನೇತ್ರಿ'– ಪೂಜಾ ಮುಖ್ಯ ಪಾತ್ರದಲ್ಲಿ ನಟಿಸುತ್ತಿರುವ ಅವರದೇ ನಿರ್ಮಾಣದ ಸಿನಿಮಾ. ಕಳೆದ ವಾರ ಸೆಟ್ಟೇರಿರುವ 'ಅಭಿನೇತ್ರಿ'ಯ ಮೂಲಕ ಪೂಜಾ ಅವರ ಕನ್ನಡದ ನಂಟಿನ ಹೊಸ ಆವೃತ್ತಿಗೆ ಚಾಲನೆ ದೊರೆತಂತಾಗಿದೆ. 'ಮುಂಗಾರು ಮಳೆ' ಯಶಸ್ಸಿನ ಮೂಲಕ ನಟನೆಯ ಸಾಲು ಸಾಲು ಅವಕಾಶಗಳನ್ನು ಪೂಜಾ ಬಾಚಿಕೊಂಡಿದ್ದರು. ಹೀಗೆ ಸಿಕ್ಕ ಸಿನಿಮಾಗಳನ್ನೆಲ್ಲ ಒಪ್ಪಿಕೊಂಡಿದ್ದೇ ಅವರ ಬಣ್ಣದ ಬದುಕು ಮಂಕಾಗಲೂ ಕಾರಣವಾಯಿತು.

ಇನ್ನೇನು ತೆರೆಮರೆಗೆ ಸರಿದರು ಎನ್ನುವಾಗ್ಗೆ 'ದಂಡುಪಾಳ್ಯ'ದ ಮೂಲಕ ಪೂಜಾ ವೃತ್ತಿಜೀವನದ ಹೊಸ ಮಜಲು ತುಳಿದಿದ್ದರು. ತೆರೆದ ಬೆನ್ನು ತೋರಿಸುವುದರ ಜೊತೆಗೆ, ಬಿಡುಬೀಸಿನ ಅಭಿನಯದ ಮೂಲಕ ಅವರು ಗಮನಸೆಳೆದಿದ್ದರು. ಪ್ರೇಕ್ಷಕರು 'ದಂಡುಪಾಳ್ಯ'ದ ಗುಂಗಿನಲ್ಲಿ ಇರುವಾಗಲೇ ಅವರು ಸೀದಾ ನಡೆದದ್ದು ಚುನಾವಣಾ ಅಖಾಡಕ್ಕೆ. ರಾಯಚೂರು ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿದ ಅವರು ಸೋಲನುಭವಿಸಿದರು.

ರಾಜಕಾರಣದ ಸೋಲನ್ನು ಮರೆಯಲೋಸುಗ ಎನ್ನುವಂತೆ ಪೂಜಾ ಇದೀಗ ಸಿನಿಮಾ ನಿರ್ಮಾಣಕ್ಕಿಳಿದಿದ್ದಾರೆ. ಚೊಚ್ಚಲ ನಿರ್ಮಾಣದ ಚಿತ್ರ 'ಅಭಿನೇತ್ರಿ'ಯ ನಾಯಕಿಯೂ ಅವರೇ. ಚಿತ್ರದ ಪೋಸ್ಟರ್‌ಗಳು ಮಿನುಗು ತಾರೆ ಕಲ್ಪನಾ ಅವರನ್ನು ನೆನಪಿಸುವಂತಿವೆ. ಆದರೆ, 'ಇದು ಕಲ್ಪನಾ ಕಥಾನಕವಲ್ಲ' ಎನ್ನುವ ಅವರು, ತಮ್ಮ ಚಿತ್ರ ಎಲ್ಲ ಹಿರಿಯ ಕಲಾವಿದೆಯರಿಗೆ ಅರ್ಪಣೆ ಎಂದು ಜಾಣ್ಮೆಯ ಮಾತನಾಡುತ್ತಾರೆ. ಒಂದು ಸದಭಿರುಚಿಯ ಚಿತ್ರವನ್ನು ನಿರ್ಮಿಸುವುದು ಅವರ ಉದ್ದೇಶವಂತೆ.

ಸತೀಶ್ ಪ್ರಧಾನ್ 'ಅಭಿನೇತ್ರಿ'ಯ ನಿರ್ದೇಶಕರು. ಮನೋಮೂರ್ತಿ ಸಂಗೀತ, ಕೆ.ಎಸ್. ಚಂದ್ರಶೇಖರ್ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು

